# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 547 |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್.<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಸಾರ್ವಜನಿಕ ಉದ್ಯಮಗಳು ಯಾವುವು; ಅವುಗಳ ಆರ್ಥಿಕ ಸ್ಥಿತಿಗತಿಗಳೇನು; (ಸಂಪೂರ್ಣ ಮಾಹಿತಿ ನೀಡುವುದು).</td><td>ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಸಣ್ಣ ಪ್ರಮಾಣದ ಕೈಗಾರಿಕೆಗಳು ವ್ಯಾಪ್ತಿಯಡಿ 03 ಸಾರ್ವಜನಿಕ ಉದ್ದಿಮೆಗಳು ಇದ್ದು, ವಿವರ ಈ ಕೆಳಕಂಡಂತಿದೆ:
<table>
<tr><th colspan="2">ನಿಗಮಗಳು</th></tr>
<tr><td>1)</td><td>ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ</td></tr>
<tr><td>2)</td><td>ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ</td></tr>
<tr><td>3)</td><td>ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ</td></tr>
</table>
ಈ ಕೆಳಕಂಡ ಸಾರ್ವಜನಿಕ ಉದ್ದಿಮೆಗಳ ಆರ್ಥಿಕ ಸ್ಥಿತಿಯ ವಿವರ ಕೆಳಕಂಡಂತಿದೆ:
<table>
<tr><th colspan="2">ನಿಗಮಗಳ ಹೆಸರು</th><th>2023-24ನೇ ಸಾಲಿನಲ್ಲಿ ಆರ್ಥಿಕ ಲಾಭದ ವಿವರ (ರೂ. ಲಕ್ಷಗಳಲ್ಲಿ)</th></tr>
<tr><td>1)</td><td>ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ</td><td>7518.53</td></tr>
<tr><td>2)</td><td>ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ</td><td>891.28</td></tr>
<tr><td>3)</td><td>ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ</td><td>121.37<br>***</td></tr>
</table>
*** ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತವು 2023-24ನೇ ಸಾಲಿನ ಅಂತ್ಯಕ್ಕೆ ಕ್ರೂಢೀಕೃತ ನಷ್ಟ-ರೂ.326.72 ಲಕ್ಷಗಳು.</td></tr>
<tr><td>ಆ)</td><td>ಸದರಿ ಉದ್ಯಮಗಳಲ್ಲಿರುವ ಉದ್ಯೋಗಿಗಳ ಸಂಖ್ಯೆ ಎಷ್ಟು; ಅದರಲ್ಲಿ ಕನ್ನಡಿಗರ ಸಂಖ್ಯೆ ಎಷ್ಟು; ನಷ್ಟದಲ್ಲಿರುವ ಉದ್ಯಮಗಳ ಬಗ್ಗೆ</td><td>ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಸಣ್ಣ ಪ್ರಮಾಣದ ಕೈಗಾರಿಕೆಗಳು ವ್ಯಾಪ್ತಿಯಡಿ ಬರುವ 03 ಸಾರ್ವಜನಿಕ ಉದ್ದಿಮೆಗಳಲ್ಲಿರುವ ಉದ್ಯೋಗಿಗಳ ಸಂಖ್ಯೆ ಮತ್ತು ಕನ್ನಡಿಗರ ಸಂಖ್ಯೆಯ ವಿವರಗಳು ಕೆಳಕಂಡಂತಿದೆ:</td></tr>
</table>

<table>
<tr>
<td></td>
<td>ಸರ್ಕಾರದ ಮುಂದಿನ ನಡೆ ಏನು; (ಮಾಹಿತಿ ನೀಡುವುದು).</td>
<td>
<table>
<tr><th colspan="2">ನಿಗಮಗಳು</th><th>ಉದ್ಯೋಗಿಗಳ ಸಂಖ್ಯೆ</th><th>ಕನ್ನಡಿಗರ ಸಂಖ್ಯೆ</th></tr>
<tr><td>1)</td><td>ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ</td><td>63</td><td>63</td></tr>
<tr><td>2)</td><td>ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ</td><td>53</td><td>50</td></tr>
<tr><td>3)</td><td>ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ</td><td>14</td><td>14</td></tr>
</table>
ನಷ್ಟದಲ್ಲಿರುವ ಉದ್ಯಮಗಳ ಬಗ್ಗೆ ಕೆಳಕಂಡಂತೆ ಕ್ರಮ ವಹಿಸಲಾಗುತ್ತಿದೆ:<br>
1) ಇ-ಮಾರುಕಟ್ಟೆ ಅವಕಾಶ ಕಲ್ಪಿಸುವುದು.<br>
2) ಉತ್ಪನ್ನಗಳನ್ನು ಆನ್ ಲೈನ್ ಮೂಲಕ ಮಾರಾಟ ಮಾಡಲು ಫ್ಲಿಪ್ ಕಾರ್ಟ್, ವೃದ್ಧಿ, ಎಂ.ಎಸ್.ಎಂ.ಇ. ಸಮರ್ಥ, ಆನ್ ಲೈನ್ ವೇದಿಕೆಗಳೊಂದಿಗೆ MoU ಒಡಂಬಡಿಕೆ.<br>
3) ರಫ್ತು ಮಾರುಕಟ್ಟೆಯಲ್ಲಿರುವ ಅವಕಾಶಗಳ ಬಳಕೆ<br>
4) 2024-25ನೇ ಸಾಲಿಗೆ ರಾಜ್ಯದ ಸಂಗ್ರಹಣಾ ಪ್ರಾಧಿಕಾರಗಳು ಅವಶ್ಯಕ ತೆಂಗಿನ ನಾರಿನ ಉತ್ಪನ್ನಗಳನ್ನು ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ ಮತ್ತು ತೆಂಗಿನ ನಾರಿನ ಸಹಕಾರಿ ಮಹಾಮಂಡಳಿಗಳಿಂದ ಏಕರೂಪವಾಗಿ ಗರಿಷ್ಟ ರೂ.50.00 ಲಕ್ಷಗಳ ವೆಚ್ಚದಲ್ಲಿ ನೇರವಾಗಿ ಸಂಗ್ರಹಣೆ ಮಾಡಿಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಆರ್ಥಿಕ ಇಲಾಖೆಯು ವಿನಾಯಿತಿ ನೀಡಿರುತ್ತದೆ.
</td>
</tr>
<tr>
<td>ಇ)</td>
<td>ಹೊಸದಾಗಿ ಸಣ್ಣ ಕೈಗಾರಿಕೆ ಪ್ರಾರಂಭ ಮಾಡುವ ಕೈಗಾರಿಕೆಗಳಿರುವ ಮಾನದಂಡಗಳೇನು; ಸಣ್ಣ ಕೈಗಾರಿಕೆ ಇಲಾಖೆ ವತಿಯಿಂದ ಪ್ರೋತ್ಸಾಹಗಳೇನು; (ವಿವರ ನೀಡುವುದು)</td>
<td>ಹೊಸದಾಗಿ ಸಣ್ಣ ಕೈಗಾರಿಕೆ ಪ್ರಾರಂಭ ಮಾಡುವ ಕೈಗಾರಿಕೆಗಳಿಗೆ ಈ ಕೆಳಕಂಡ ಮಾನದಂಡಗಳು ಇರುತ್ತವೆ:<br>
1. ಮಾಲೀಕತ್ವ ಉದ್ಯಮ ಸ್ಥಾಪಿಸಲು ಬಯಸುವ ಉದ್ಯಮಶೀಲರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ / ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನಿವೇಶನದಲ್ಲಿ ಕೈಗಾರಿಕೆಯನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದಲ್ಲಿ "ಕಾಮನ್ ಅಪ್ಲಿಕೇಷನ್ ಫಾರಂ"ನ್ನು ಭರ್ತಿ ಮಾಡಿ ಅರ್ಜಿಯನ್ನು ಸಂಬಂಧಿಸಿದ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ ಸಲ್ಲಿಸಬೇಕಾಗುತ್ತದೆ.<br>
2. ಜಿಲ್ಲಾ ಕೈಗಾರಿಕಾ ಕೇಂದ್ರವು ಈ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗುವ "ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ" ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ತಾತ್ವಿಕ ಅನುಮೋದನಾ ಪತ್ರವನ್ನು ಉದ್ಯಮಶೀಲರಿಗೆ ನೀಡುತ್ತದೆ.<br>
3. ನಂತರ ಉದ್ಯಮಶೀಲರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ನಿವೇಶನಕ್ಕೆ ಅರ್ಜಿ ಸಲ್ಲಿಸಿ ನಿವೇಶನವನ್ನು ಪಡೆದುಕೊಳ್ಳಬೇಕಾಗುತ್ತದೆ. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ</td>
</tr>
</table>

ನಿವೇಶನವಾದಲ್ಲಿ ಅದಕ್ಕೆ ಸಂಬಂಧಿಸಿದ ಸಮಿತಿಯು ನಿವೇಶನವನ್ನು ಹಂಚಿಕೆ ಮಾಡುತ್ತದೆ.

4. ಉದ್ಯಮಶೀಲರು ನಿವೇಶನದ ಹಂಚಿಕೆಯಾದ ನಂತರ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಹಣಕಾಸಿನ ನೆರವಿಗಾಗಿ ಬ್ಯಾಂಕ್ / ಕೆ.ಎಸ್.ಎಫ್.ಸಿ.ಗೆ ಯೋಜನಾ ವರದಿ ಮತ್ತು ಇತರೆ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಸಾಲ ಮಂಜೂರಾತಿಯನ್ನು ಪಡೆದುಕೊಳ್ಳಬೇಕಾಗುತ್ತದೆ.
5. ಕೈಗಾರಿಕಾ ಕಟ್ಟಡ ನಿರ್ಮಾಣಕ್ಕಾಗಿ ಕೆ.ಐ.ಎ.ಡಿ.ಬಿ. / ಕೆ.ಎಸ್.ಎಸ್.ಐ.ಡಿ.ಸಿ. / ಸ್ಥಳೀಯ ಪ್ರಾಧಿಕಾರದಿಂದ ನಕ್ಷೆ ಅನುಮೋದನೆ ಪಡೆದುಕೊಂಡು ಕಟ್ಟಡ ನಿರ್ಮಾಣ ಪ್ರಾರಂಭಿಸಬೇಕಾಗುತ್ತದೆ.
6. ಕೈಗಾರಿಕಾ ಚಟುವಟಿಕೆಯನ್ನು ಆಧರಿಸಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ "ಕನ್ಸೆಂಟ್ ಫಾರ್ ಎಸ್ಟಾಬ್ಲಿಷ್‌ಮೆಂಟ್" ಅನುಮತಿಯನ್ನು ಪಡೆಯಬೇಕಾಗುತ್ತದೆ.
7. ವಿದ್ಯುತ್ ಸಂಪರ್ಕಕ್ಕಾಗಿ ಸಂಬಂಧಿಸಿದ ಎಸ್ಕಾಂನಿಂದ ಮಂಜೂರಾತಿಯನ್ನು ಪಡೆಯಬೇಕಾಗುತ್ತದೆ.
8. ನೀರಿನ ಸಂಪರ್ಕಕ್ಕಾಗಿ ಸಂಬಂಧಿಸಿದ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯಬೇಕಾಗುತ್ತದೆ.
9. ಚಟುವಟಿಕೆ / ಯಂತ್ರೋಪಕರಣಗಳನ್ನು ಆಧರಿಸಿ "ಫ್ಯಾಕ್ಟರೀಸ್ ಮತ್ತು ಬಾಯ್ಲರ್" ಇಲಾಖೆಯಿಂದ ಅನುಮತಿ ಪಡೆಯಬೇಕಾಗುತ್ತದೆ.
10. ಕಾರ್ಮಿಕರ ಸಂಖ್ಯೆಯನ್ನು ಆಧರಿಸಿ ಕಾರ್ಮಿಕ ಇಲಾಖೆಯಿಂದ ಅನುಮೋದನೆ ಪಡೆದುಕೊಳ್ಳಬೇಕಾಗುತ್ತದೆ.
11. ಕಾರ್ಮಿಕರ ಸಂಖ್ಯೆ 20 ಕ್ಕೂ ಹೆಚ್ಚಾದಲ್ಲಿ ಇ.ಎಸ್.ಐ/ ಪಿ.ಎಫ್ / ವೃತ್ತಿ ತೆರಿಗೆ ನೊಂದಣಿ ಪಡೆಯಬೇಕಾಗುತ್ತದೆ.
12. ಉದ್ದೇಶಿತ ಕೈಗಾರಿಕೆಯ ವಾರ್ಷಿಕ ವಹಿವಾಟು ರೂ.40 ಲಕ್ಷಕ್ಕಿಂತ ಹೆಚ್ಚಾಗುವುದಿದ್ದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಿಂದ "ಜಿ.ಎಸ್.ಟಿ" ನೊಂದಣಿ ಪಡೆಯಬೇಕಾಗುತ್ತದೆ.
13. ಆಹಾರ ಸಂಸ್ಕರಣಾ ಕೈಗಾರಿಕಾ ಚಟುವಟಿಕೆಯಾದಲ್ಲಿ "ಎಫ್.ಎಸ್.ಎಸ್.ಎ.ಐ." ರಹದಾರಿಯನ್ನು ಪಡೆಯಬೇಕಾಗುತ್ತದೆ.
14. ಅಪಾಯಕಾರಿ ಕೈಗಾರಿಕಾ ಚಟುವಟಿಕೆಯಾದಲ್ಲಿ "ಫೈರ್ ಸೇಫ್ಟಿ ಪ್ರಮಾಣ ಪತ್ರ" ವನ್ನು ಅಗ್ನಿಶಾಮಕ ಇಲಾಖೆಯಿಂದ ಪಡೆದುಕೊಳ್ಳಬೇಕಾಗುತ್ತದೆ.
15. ಕಟ್ಟಡ ನಿರ್ಮಾಣ, ಯಂತ್ರೋಪಕರಣಗಳ ಸ್ಥಾಪನೆಯಾದ ನಂತರ ಕೈಗಾರಿಕಾ ಚಟುವಟಿಕೆಯನ್ನು ಆಧರಿಸಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ "ಕನ್ಸೆಂಟ್ ಫಾರ್ ಆಪರೇಷನ್" ಅನುಮತಿಯನ್ನು ಪಡೆಯಬೇಕಾಗುತ್ತದೆ.

ಹೊಸದಾಗಿ ಸಣ್ಣ ಕೈಗಾರಿಕೆ ಪ್ರಾರಂಭ ಮಾಡುವ ಕೈಗಾರಿಕೆಗಳನ್ನು ಉತ್ತೇಜಿಸಲು ರಾಜ್ಯ ಸರ್ಕಾರವು ಹೊಸದಾಗಿ ಕೈಗಾರಿಕಾ ನೀತಿ 2025-30ನ್ನು ಜಾರಿಗೆ ತಂದಿದ್ದು, ಅದರಡಿ ಕೆಳಕಂಡ ರಿಯಾಯಿತಿ ಮತ್ತು ಪ್ರೋತ್ಸಾಹನೆಗಳನ್ನು ನೀಡಲಾಗುತ್ತಿದೆ:

| | | |
|---|---|---|
| | | 1) ಮುದ್ರಾಂಕ ಶುಲ್ಕ ವಿನಾಯಿತಿ<br>2) ನೋಂದಣಿ ಶುಲ್ಕ ರಿಯಾಯಿತಿ<br>3) ಬಂಡವಾಳ ಹೂಡಿಕೆ ಸಹಾಯಧನ<br>4) ಕಿರು ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಹಾಯಧನ<br>5) ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>6) ರಫ್ತು ಆಧಾರಿತ ಘಟಕಗಳಿಗೆ ರಿಯಾಯಿತಿ.<br>7) ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ.<br>8) ವಿದ್ಯುತ್ ತೆರಿಗೆ ವಿನಾಯಿತಿ<br>9) ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಪ್ರಮಾಣ ಪತ್ರ ಸಹಾಯಧನ<br>10) ಮಳೆ ನೀರುಕೊಯ್ಲು / ಸಂರಕ್ಷಣೆ ಸಹಾಯಧನ<br>11) ತಂತ್ರಜ್ಞಾನ ಉನ್ನತೀಕರಣಕ್ಕೆ ಬಡ್ಡಿ ಸಹಾಯಧನ |
| ಈ) | ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಂದ ಇಲ್ಲಿಯವರೆಗೆ ಎಷ್ಟು ಜನರಿಗೆ ಉದ್ಯೋಗ ಲಭಿಸಿದೆ; (ವಿವರ ನೀಡುವುದು). | ರಾಜ್ಯದಲ್ಲಿ ಜುಲೈ 2020 ರಿಂದ ಎಸ್.ಎಂ.ಎಂ.ಇ. ಉದ್ಯಮಗಳ ನೊಂದಣಿಯನ್ನು ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ನೊಂದಣಿ ಮಾಡಲಾಗುತ್ತಿದ್ದು, ಸದರಿ ತಂತ್ರಾಂಶದಲ್ಲಿರುವಂತೆ ಫೆಬ್ರುವರಿ-2025 ಅಂತ್ಯಕ್ಕೆ ಒಟ್ಟಾರೆ **19,42,286** ಎಂ.ಎಸ್.ಎಂ.ಇ. ಗಳು ನೊಂದಣಿಯಾಗಿದ್ದು, ಅವುಗಳಲ್ಲಿ 19,02,436 ಸೂಕ್ಷ್ಮ, 36,838 ಸಣ್ಣ ಮತ್ತು 3,012 ಮಧ್ಯಮ ಕೈಗಾರಿಕೆಗಳಾಗಿರುತ್ತವೆ. ಇವುಗಳಿಂದ 1,85,40,771 ಉದ್ಯೋಗ ಸೃಜನೆಯಾಗಿರುತ್ತದೆ. |
| ಉ) | ಸಣ್ಣ ಕೈಗಾರಿಕೆ ಇಲಾಖೆಯಲ್ಲಿರುವ ಒಟ್ಟು ಸಿಬ್ಬಂದಿಗಳ ಸಂಖ್ಯೆಗಳೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು; ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು? | ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಒಟ್ಟು ಮಂಜೂರಾಗಿರುವ 933 ಹುದ್ದೆಗಳ ಪೈಕಿ ಕರ್ತವ್ಯ ನಿರತ ಸಿಬ್ಬಂದಿಗಳ ಸಂಖ್ಯೆ 333, ಖಾಲಿ ಇರುವ ಹುದ್ದೆಗಳ ಸಂಖ್ಯೆ 600. ಈ ಪೈಕಿ ಉಳಿಕೆ ಮೂಲ ವೃಂದದಡಿ ಸಹಾಯಕ ನಿರ್ದೇಶಕರ 20, ಕೈಗಾರಿಕಾ ವಿಸ್ತರಣಾಧಿಕಾರಿ-50, ಪ್ರಥಮ ದರ್ಜೆ ಸಹಾಯಕರು-10 ಹಾಗೂ ಹೈದರಾಬಾದ್ ಕರ್ನಾಟಕ ಸ್ಥಳೀಯ ವೃಂದದಡಿ ಸಹಾಯಕ ನಿರ್ದೇಶಕರ-03 ಕೈಗಾರಿಕಾ ವಿಸ್ತರಣಾಧಿಕಾರಿ-13, ಪ್ರಥಮ ದರ್ಜೆ ಸಹಾಯಕರು-01, ದ್ವಿತೀಯ ದರ್ಜೆ ಸಹಾಯಕರು–02, ಹೀಗೆ ಒಟ್ಟು 99 ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅದರಲ್ಲಿ 86 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |

ಸಿಐ 45 ಸಿಎಸ್‌ಸಿ 2025

**(ಶರಣಬಸಪ್ಪ ದರ್ಶನಾಪೂರ)**

ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು.